# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916
(ನ್ಯಾಕ್ ನಿಂದ 'ಎ'ಶ್ರೇಣಿ ಪಡೆದಿದೆ)

ಹಣಕಾಸು ಅಧಿಕಾರಿಗಳ ಕಛೇರಿ
ವಿಶ್ವವಿದ್ಯಾನಿಲಯಕಾರ್ಯಸೌಧ
ಮೈಸೂರು–570005

ಸಂಖ್ಯೆ:ಹಶಾ.4(A)/236/2019-20 ದಿನಾಂಕ: 25–09–2019

**ಸುತ್ತೋಲೆ**

ವಿಷಯ : 2019–20ನೇ ಸಾಲಿನ ಆದಾಯ ತೆರಿಗೆಯನ್ನು ಕಟಾಯಿಸುವ ಬಗ್ಗೆ.

ಉಲ್ಲೇಖ : ಆದಾಯ ತೆರಿಗೆ ಸುತ್ತೋಲೆಯ ಸಂಖ್ಯೆ F No. 275/192/2016-IT(B) dt:02/01/2017

*=*=*

ಆದಾಯ ತೆರಿಗೆಗೆ ಸಂಬಂಧಿಸಿದಂತೆ ನಿರೀಕ್ಷಿತ ಆದಾಯ ಮತ್ತು ಪಾವತಿ ಮಾಡಬೇಕಾದ ಆದಾಯ ತೆರಿಗೆ ಮುಂತಾದ ಮಾಹಿತಿಗಳನ್ನು ಪ್ರತಿ ವರ್ಷಾರಂಭಕ್ಕೆ ಮೊದಲೇ ಅಂದರೆ ಮಾರ್ಚ್ ತಿಂಗಳಲ್ಲೇ ನೀಡಿ ಆದಾಯ ತೆರಿಗೆಯನ್ನು 12 ಸಮ ಕಂತುಗಳಲ್ಲಿ ಮಾರ್ಚ್‌ನಿಂದ ಫೆಬ್ರವರಿ ವೇತನದಲ್ಲಿ ಕಡಿತಗೊಳಿಸಲು ವ್ಯವಸ್ಥೆ ಮಾಡಬೇಕೆಂದು ಪ್ರತಿ ವರ್ಷ ಕಛೇರಿಯಿಂದ ಆದಾಯ ತೆರಿಗೆ ಬಗೆಗೆ ಹೊರಡಿಸುವ ಸುತ್ತೋಲೆಯಲ್ಲಿ ಈಗಾಗಲೇ ತಿಳಿಸಲಾಗಿದೆ.

ಆದಾಯ ತೆರಿಗೆ ನಿಯಮಗಳ ವೇತನ ಮೂಲದಲ್ಲಿಯ ತೆರಿಗೆ ಕಡಿತವನ್ನು (TDS) ಸಮಾನ ಕಂತುಗಳಲ್ಲಿ ಕಡಿತ ಮಾಡಬೇಕಾಗುತ್ತದೆ. ಆದರಿಂದ ಆದಷ್ಟು ಸಮಾನ ಕಂತುಗಳಲ್ಲಿ ಹತ್ತಿರವಾದ ಮೊಬಲಗನ್ನು ಕಡಿತ ಮಾಡುವುದು ಅನಿವಾರ್ಯವಾಗಿದೆ. 2019–20ನೇ ಸಾಲಿನ ಆರ್ಥಿಕ ವರ್ಷದಲ್ಲಿ ರೂ. 2,50,000–00 ಕ್ಕಿಂತ ಹೆಚ್ಚಿನ ಆದಾಯ ಇರುವ ಎಲ್ಲಾ ಸ್ವಯಂ ಬಟವಾಡೆ ಅಧಿಕಾರಿಗಳ ಮತ್ತು ಆದಾಯ ತೆರಿಗೆ ಕಡಿತಗೊಳಿಸಲು ಜವಾಬ್ದಾರರಾಗಿರುವ ವಿಶ್ವವಿದ್ಯಾನಿಲಯದ ಎಲ್ಲಾ ಬಟವಾಡೆ ಅಧಿಕಾರಿಗಳ ಗಮನಕ್ಕೆ ಮತ್ತು ಪಾಲನೆಗೆ ಕೆಳಗಿನ ಅಂಶಗಳನ್ನು ತಂದಿದೆ.

1. ಹಣಕಾಸು ಶಾಖೆಯಿಂದ ನೇರವಾಗಿ ವೇತನ ಪಡೆಯುವ ಎಲ್ಲಾ ಅಧ್ಯಾಪಕರು/ಅಧಿಕಾರಿಗಳು 2019–20ನೇ ಸಾಲಿನ ಆದಾಯ ತೆರಿಗೆ ಪಾವತಿ ಮಾಡುವ ಬಗ್ಗೆ ಈ ಸುತ್ತೋಲೆಗೆ ಲಗತ್ತಿಸಿರುವ ನಮೂನೆಯಲ್ಲಿ ವಿವರಗಳನ್ನು ದಿನಾಂಕ **16–10–2019**ರೊಳಗೆ ಸಲ್ಲಿಸಬೇಕು ಮತ್ತು PANCARD ನ ಒಂದು PHOTO COPY ಸಹ ಲಗತ್ತಿಸುವುದು ಕಡ್ಡಾಯ.
2. ದಿನಾಂಕ 01–04–2019 ರಿಂದ 31–03–2020 ರವರೆಗೆ ನಿರೀಕ್ಷಿತ ಆದಾಯ ನಿಯಮಾನುಸಾರ ಪಾವತಿ ಮಾಡಬೇಕಾದ ಒಟ್ಟು ಆದಾಯ ತೆರಿಗೆ, ಇತ್ಯಾದಿ ವಿವರಗಳನ್ನು ನೀಡಬೇಕು.
3. ಪ್ರಸಕ್ತ ಹಣಕಾಸು ವರ್ಷದಲ್ಲಿ ನೀಡಬೇಕಾಗುವ ಆದಾಯ ತೆರಿಗೆಯ ಮೊಬಲಗನ್ನು ಈಗಾಗಲೇ ಆಗಿರುವ ಕಡಿತ ಕಳೆದು ಉಳಿಕೆಯನ್ನು ಅಕ್ಟೋಬರ್ 2019ರ ವೇತನದಿಂದ ಪ್ರಾರಂಭಿಸಿ ಫೆಬ್ರವರಿ 2020 ವೇತನದವರೆಗೆ 5 ಸಮಾನ ಕಂತುಗಳಲ್ಲಿ ಪೂರ್ಣವಾಗಿ ಕಡಿತಗೊಳಿಸಬೇಕು.
4. ಆದಾಯವನ್ನು ಲೆಕ್ಕಾಚಾರ ಮಾಡುವಾಗ ನಗದಾಗಿ ಬಂದಿರುವ ಆದಾಯದ ಜೊತೆಗೆ ದಿನಾಂಕ 31–03–2020ರ ತನಕ ಬರಬಹುದಾದ ನಿರೀಕ್ಷಿತ ಆದಾಯವನ್ನು ಸಹಾ ಗಣನೆಗೆ ತೆಗೆದುಕೊಳ್ಳಬೇಕು. ಅಲ್ಲದೆ ದಿನಾಂಕ 31–03–2020 ರವರೆಗೆ ಪಡೆಯಬಹುದಾದ ಪರೀಕ್ಷಾ ಸಂಭಾವನೆ ಮತ್ತು ಇತರೆ ಸಂಭಾವನೆಗಳ ಮೊತ್ತವನ್ನು ಸಹಾ ಆದಾಯದಲ್ಲಿ ತೋರಿಸತಕ್ಕದ್ದು. ಈ ಅವಧಿಯಲ್ಲಿ ಪಡೆಯುವ ವೇತನದ ಬಾಕಿ ಮೊಬಲಗನ್ನು ಗಣನೆಗೆ ತೆಗೆದುಕೊಳ್ಳಬೇಕು. ನಮ್ಮ ವಿಶ್ವವಿದ್ಯಾನಿಲಯದಿಂದ ಪಡೆದಿರುವ ಎಲ್ಲಾ ರೀತಿಯ ಸಂಭಾವನೆಗಳ ಮೊಬಲಗನ್ನಂತೂ ತಪ್ಪದೇ ಆದಾಯ ತೆರಿಗೆ ವಿವರ ತ:ಖ್ತೆಯಲ್ಲಿ ಸೇರಿಸಿರಬೇಕು. ಕಡಿಮೆ ತೋರಿಸುವ ಪ್ರಕರಣಗಳನ್ನು ಆದಾಯ ತೆರಿಗೆ ಇಲಾಖೆಯು ಗಂಭೀರವಾಗಿ ಪರಿಗಣಿಸುತ್ತಿರುವುದರಿಂದ ಈ ಬಗ್ಗೆ ಎಚ್ಚರವಹಿಸುವುದು ಸೂಕ್ತ.
5. ಹಣಕಾಸು ವಿಭಾಗದಿಂದ ನೇರವಾಗಿ ವೇತನ ಪಡೆಯುವ ಅಧ್ಯಾಪಕರು ಮತ್ತು ಅಧಿಕಾರಿಗಳು ದಿನಾಂಕ 16–10–2019ರ ಒಳಗಾಗಿ ವಿವರಗಳನ್ನು ಈ ಕಛೇರಿಗೆ ಒದಗಿಸದಿದ್ದರೆ, ಈ ಕಛೇರಿಯಲ್ಲಿ ದೊರೆಯುವ ದಾಖಲೆಗಳ ಆಧಾರದ ಮೇಲೆ ಆದಾಯ ತೆರಿಗೆಯನ್ನು ಲೆಕ್ಕಚಾರ ಮಾಡಿ ಆಯಾ ಉದ್ಯೋಗಿಗಳ ವೇತನದಿಂದ ಕಡಿತಗೊಳಿಸಲಾಗುವುದು. ನಮೂನೆ 16 ಅನ್ನು ಈ ಆಧಾರದಲ್ಲಿಯೇ ನೀಡಲಾಗುವುದು ಮತ್ತು ಈ ಬಗ್ಗೆ ಯಾವ ವಿಧವಾದ ಪತ್ರ ವ್ಯವಹಾರಕ್ಕೂ ಅವಕಾಶವಿರುವುದಿಲ್ಲ. ಉಂಟಾಗಬಹುದಾದ ಸಮಸ್ಯೆಗಳಿಗೆ ಸಂಬಂಧಿಸಿದವರೆ ಹೊಣೆಗಾರರಾಗಬೇಕಾಗಬಹುದು.
6. ಎಲ್ಲಾ ಸ್ವಯಂ ಬಟವಾಡೆ ಅಧಿಕಾರಿಗಳು ಈ ಕಛೇರಿಯಿಂದ ಯಾವುದೇ ಸೂಚನೆ ನೆನಪೋಲೆ ಅಥವಾ ಸುತ್ತೋಲೆ ನಿರೀಕ್ಷಿಸದೆ ಪ್ರತಿ ವರ್ಷ ಮಾರ್ಚ್ ತಿಂಗಳಿನಲ್ಲಿ ಆಯಾ ವರ್ಷದ ಒಟ್ಟು ನಿರೀಕ್ಷಿತ ಆದಾಯ ಮತ್ತು ವಸೂಲಿಸಬೇಕಾದ ಆದಾಯ ತೆರಿಗೆಯ ವಿವರವನ್ನು ಈ ಕಛೇರಿಗೆ ಒದಗಿಸಿ ನೀಡಬೇಕಾದ ಆದಾಯ ತೆರಿಗೆಯ 1/12 ಭಾಗ ಪ್ರತಿ ತಿಂಗಳು ಸಂಬಳದಲ್ಲಿ ಕಡಿತಗೊಳಿಸಲು ಅವಕಾಶ ಮಾಡಬೇಕು. ಇದರಿಂದ ವರ್ಷಾಂತ್ಯದ ತರಾತುರಿ ಸಮಸ್ಯೆ ಇಲ್ಲವಾಗುತ್ತದೆ. ಹಾಗೂ ಈ ಕಛೇರಿಯ ಸಮಯ ಉಳಿಸಲು ಸಹಕರಿಸಿದಂತೆ ಆಗುತ್ತದೆ. ಈ ನಿಯಮವನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ಮತ್ತೊಮ್ಮೆ ಪುನರುಚ್ಛರಿಸಲಾಗಿದೆ.
7. ಮನೆ ಕಟ್ಟಲು / ಕೊಳ್ಳಲು ಪಡೆದ ಮುಂಗಡಕ್ಕೆ ಸಂಬಂಧಿಸಿದ ಬಡ್ಡಿಯ ಬಗ್ಗೆ ಆದಾಯ ತೆರಿಗೆ ವಿನಾಯಿತಿಯನ್ನು ಈ ಕಛೇರಿಯಲ್ಲಿ ಸೂಕ್ತ ದಾಖಲೆಗಳನ್ನು ಪರಿಶೀಲಿಸಿದ ನಂತರ ನೀಡಲು ಸಾಧ್ಯವಾಗುವುದು. ಈ ವಿನಾಯಿತಿ ಕ್ರೂಢೀಕೃತ ಬಡ್ಡಿಗೆ(Accrued Interest) ಮಾತ್ರ ದೊರೆಯುವುದು.
8. ಅವಲಂಬಿತ ಅಂಗವಿಕಲರ ಚಿಕಿತ್ಸೆ ರಿಯಾಯಿತಿ ಕೋರುವಂತಹವರು ಸಕ್ಷಮ (Competent) ವೈದ್ಯರಿಂದ ಅಂಗವಿಕಲತೆ ಬಗ್ಗೆ ದೃಢೀಕರಣ ಪತ್ರ ಮತ್ತು ಅವಲಂಬಿತರಿಗೆ ವೈದ್ಯಕೀಯ ವೆಚ್ಚ ನಿರ್ವಹಣೆಗೆ ದೃಢೀಕರಣ ನೀಡಬೇಕು.
9. ಬೇರಾವುದೇ ರೀತಿಯ ರಿಯಾಯಿತಿ ಪಡೆಯಲು ಅರ್ಹರಿರುವವರು ಸೂಕ್ತ ಅಧಿಕೃತ ಪ್ರಾಧಿಕಾರದ ವಿನಾಯಿತಿ ಪತ್ರವನ್ನು ದಿನಾಂಕ **16–10–2019** ರೊಳಗೆ ಸಲ್ಲಿಸಿದ್ದಲ್ಲಿ ಮಾತ್ರ ಪರಿಗಣಿಸಲು ಸಾಧ್ಯವಾಗುವುದು.
10. ಆದಾಯ ತೆರಿಗೆ ವಿನಾಯಿತಿಗೆ ಸಂಬಂಧಿಸಿದಂತೆ ಉಳಿತಾಯದ ದಾಖಲೆಗಳನ್ನು ಹಣಕಾಸು ವಿಭಾಗಕ್ಕೆ ಸಲ್ಲಿಸಲು **08ನೇ ಜನವರಿ 2020**ಅಂತಿಮ ದಿನವಾಗಿರುತ್ತದೆ.

**ಬಟವಾಡೆ ಅಧಿಕಾರಿಗಳು :**

10.1 ಮೇಲಿನ ನಿರ್ದೇಶನಗಳನ್ನೇ ಅಳವಡಿಸಿಕೊಂಡು ಅವರವರ ಕಛೇರಿಯ ವ್ಯಾಪ್ತಿಗೆ ಬರುವ ನೌಕರರಿಂದ ಆದಾಯ ತೆರಿಗೆಯ ವಿವರಗಳನ್ನು ಪಡೆದು ಅದರ ಸರಿ ತಪ್ಪುಗಳನ್ನು ಪರಿಶೀಲಿಸಿ, ಉದ್ಯೋಗಿಗಳ ವೇತನದಿಂದ ಆದಾಯ ತೆರಿಗೆಯನ್ನು ನಿಯಮಾನುಸಾರ ಕಡಿತಗೊಳಿಸುವುದು ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ನೌಕರರು ಸಕಾಲದಲ್ಲಿ ವಿವರ ಒದಗಿಸದಿದ್ದಲ್ಲಿ ತಮ್ಮ ಕಛೇರಿಯ ಮಾಹಿತಿ ಆಧಾರದಲ್ಲಿ ತೆರಿಗೆ ಕಡಿತಗೊಳಿಸಲು ಕ್ರಮ ಕೈಗೊಳ್ಳಬೇಕು. ಆದಷ್ಟು ಸಮಾನ ಮಾಸಿಕ ಕಂತುಗಳಲ್ಲಿ ಕಡಿತಗೊಳಿಸಲು ವ್ಯವಸ್ಥೆ ಮಾಡಿಕೊಳ್ಳಬೇಕು ಉದ್ಯೋಗಿಗಳ ವೇತನದಿಂದ ಕಡಿತಗೊಳಸುವ ಆದಾಯ

ತೆರಿಗೆಯನ್ನು ನಿಯಮಾನುಸಾರ ಆದಾಯ ತೆರಿಗೆ ಇಲಾಖೆಗೆ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು ಅವರTAN ಅಡಿಯಲ್ಲಿ ಜಮಾ ಮಾಡುವುದು ಅವರ ವೈಯಕ್ತಿಕ ಜವಾಬ್ದಾರಿಯಾಗಿರುತ್ತದೆ.

10.2 ನಮೂನೆ–16 ಮತ್ತು 24 ಅನ್ನು ಕ್ರಮಬದ್ಧವಾಗಿ ಸಿದ್ಧಪಡಿಸಿ, ಆದಾಯ ತೆರಿಗೆ ಇಲಾಖೆಗೆ ಕಳುಹಿಸಿ ನಮೂನೆ–24ರ ಪ್ರತಿಯನ್ನು ಈ ಕಛೇರಿಗೆ ಮಾಹಿತಿಗಾಗಿ ಕಳುಹಿಸಬೇಕು.

10.3 ತಾತ್ಕಾಲಿಕ ಆಧಾರದ ಮೇಲೆ ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಾಗೂ ವಾರ್ಷಿಕ ರೂ. 2,50,000–00 ಕ್ಕಿಂತ ಹೆಚ್ಚಾಗಿ ಆದಾಯ ಬರುವವರ ಸಂಬಂಧದಲ್ಲಿ ಖಾಯಂ ಉದ್ಯೋಗಿಗಳಂತೆಯೇ ತೆರಿಗೆ ವಸೂಲಿಗೆ ಕ್ರಮ ತೆಗೆದುಕೊಳ್ಳಬೇಕು. ತಾತ್ಕಾಲಿಕ ನೌಕರರ ಆದಾಯ ತೆರಿಗೆ ಹೊಣೆಗಾರಿಕೆ ಆಯಾ ಬಡವಾಡೆ ಅಧಿಕಾರಿಗಳದ್ದೇ ಆಗಿರುತ್ತದೆ.

11. ಆದಾಯ ತೆರಿಗೆಗೆ ಒಳಪಡುವ ಎಲ್ಲಾ ಉದ್ಯೋಗಿಗಳು (ಸ್ವಯಂ ಬಡವಾಡೆ ಅಧಿಕಾರಿಗಳು ಸೇರಿದಂತೆ) ಲೆಕ್ಕಾಚಾರದ ನಮೂನೆಯೊಂದಿಗೆ ಒಪ್ಪಿಗೆ ಪತ್ರಕ್ಕೆ ಸಹಿ ಮಾಡಿ ಸಲ್ಲಿಸಬೇಕು (ಅನುಬಂಧ–3) ಬಟವಾಡೆ ಅಧಿಕಾರಿಗಳು ಸಹಾ ತಮಗೆ ಸಂಬಂಧಿಸಿದ ಉದ್ಯೋಗಿಗಳ ಬಗ್ಗೆ ಇದೇ ಕ್ರಮ ಅನುಸರಿಸುವಂತೆ ತಿಳಿಸಲಾಗಿದೆ.

12. ವೇತನ ಹಾಗೂ ಇತರೆ ಆದಾಯಗಳಿಗೆ ಸಂಬಂಧಿಸಿದಂತೆ ವಿವರಗಳನ್ನು ಕ್ರೂಢೀಕರಿಸಿ ಆದಾಯ ತೆರಿಗೆ ಅಧಿಕಾರಿಗಳಿಗೆ ನಿಯಮಾನುಸಾರ ವೈಯಕ್ತಿಕ ರಿಟರ್ನ್ಸ್ ಸಲ್ಲಿಸುವುದು ಆಯಾ ಉದ್ಯೋಗಿಗಳ ಸ್ವಂತ ಜವಾಬ್ದಾರಿಯಾಗಿರುತ್ತದೆ.

13. ಈ ಕಛೇರಿಗೆ ವಿವರಗಳನ್ನು ಒದಗಿಸುವಾಗ ಆದಾಯ ತೆರಿಗೆ ಇಲಾಖೆ ನೀಡಿರುವ ಖಾಯಂ ಅಕೌಂಟ್ ನಂಬರ್(PAN) ಅನ್ನು ತಪ್ಪದೆ ನಮೂದಿಸಬೇಕು.

14. ಈ ಸುತ್ತೋಲೆಯಲ್ಲಿನ ವಿವರಗಳನ್ನು ಲಭ್ಯ ಮಾಹಿತಿ ಆದಾರದಲ್ಲಿ ನೀಡಲಾಗಿದೆ. ಈ ವಿವರಗಳೇ ಪೂರ್ಣವಲ್ಲ. ಆದ್ದರಿಂದ ಹೆಚ್ಚಿನ ವಿವರ ಮತ್ತು ನಿಖರತೆಯ ಬಗೆಗೆ **"ಇನ್‌ಕಂಟ್ಯಾಕ್ಸ್‌ರೂಲ್ಸ್" ಮತ್ತು "ಇನ್‌ಕಂಟ್ಯಾಕ್ಸ್‌ಆಕ್ಟ್"** ಅನ್ನು ಒದಿಕೊಳ್ಳುವುದು.

15. ಈ ಸುತ್ತೋಲೆಯೊಂದಿಗೆ ಆದಾಯ ತೆರಿಗೆ ಲೆಕ್ಕಾಚಾರದ ವಿವರದೊಡನೆ ಲಗತ್ತಿಸಬೇಕಾದ ಒಪ್ಪಿಗೆ ಪತ್ರವನ್ನು ಸಹ ಲಗತ್ತಿಸಿದೆ. ಆಯಾ ಆರ್ಥಿಕ ವರ್ಷದ ಮಧ್ಯಾಂತರದಲ್ಲಿ ಒಂದು ವಿಭಾಗದಿಂದ ಮತ್ತೊಂದು ವಿಭಾಗಕ್ಕೆ ವರ್ಗಾವಣೆಗೊಂಡಂತಹ ಉದ್ಯೋಗಿಗಳಿಗೆ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು ಆಯಾ ವಿಭಾಗಗಳ ಆದಾಯದ ಉಳಿತಾಯವನ್ನು ಗಣನೆಗೆ ತೆಗೆದುಕೊಂಡು ನಮೂನೆ–16 ಅನ್ನು ವಿತರಿಸುವುದು.

ಪ್ರೊ॥ ಟಿ ಎಸ್ ದೇವರಾಜ
ಹಣಕಾಸು ಅಧಿಕಾರಿ

ಗೆ,

1. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2. ಕುಲಸಚಿವರು (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಕುಲಪತಿಗಳ/ಕುಲಸಚಿವರ /ಕು.ಸ.(ಪ)/ಹ.ಅ./ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಉಪ ಹಣಕಾಸು ಅಧಿಕಾರಿಗಳು 1 ಮತ್ತು 2 ಹಣಕಾಸು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಸಹಾಯಕ ಹಣಕಾಸು ಅಧಿಕಾರಿಗಳು 1 ಮತ್ತು 2 ಹಣಕಾಸು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ವಿಶ್ವವಿದ್ಯಾನಿಲಯದ ಎಲ್ಲಾ ಬಟವಾಡೆ ಅಧಿಕಾರಿಗಳು, ಸ್ವಯಂ ಬಟವಾಡೆ ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ನಿರ್ದೇಶಕರು, ಸ್ನಾತಕೋತ್ತರ ಅಧ್ಯಯನ ಕೇಂದ್ರ, ಮಂಡ್ಯ/ಹಾಸನ.
8. ಎಲ್ಲಾ ವಿಭಾಗಾಧ್ಯಕ್ಷರು ಸ್ನಾತಕೋತ್ತರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
9. ಪ್ರಾಂಶುಪಾಲರು, ಯುವರಾಜ/ಮಹಾರಾಜ/ಲಲಿತ ಕಲೆಗಳ ಮಹಿಳಾ ಕಾಲೇಜು/ವಿ.ವಿ.ಸಂಜೆ ಕಾಲೇಜು, ಮೈಸೂರು.
10. ವಿಭಾಗಾದ್ಯಕ್ಷರು, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರು.
11. ಆಡಳಿತಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು.
12. ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
13. ನಿರ್ದೇಶಕರು, ವಿಶ್ವವಿದ್ಯಾನಿಲಯದ ಮುದ್ರಣಾಲಯ, ಮಾನಸಗಂಗೋತ್ರಿ, ಮೈಸೂರು.
14. ಆರೋಗ್ಯಾಧಿಕಾರಿಯವರು, ಮಹಾರಾಜ ಕಾಲೇಜು ಆವರಣ ಮತ್ತು ಮಾನಸಗಂಗೋತ್ರಿ, ಮೈಸೂರು.
15. ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು.
16. ಗ್ರಂಥಪಾಲಕರು, ಮಾನಸಗಂಗೋತ್ರಿ, ಮೈಸೂರು.
17 ಉಪ ಗ್ರಂಥಪಾಲಕರು, ಸ್ನಾತಕ ಪೂರ್ವ ಗ್ರಂಥಾಲಯ, ಮಾನಸಗಂಗೋತ್ರಿ, ಮೈಸೂರು.
18. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಶತಮಾನೋತ್ಸವ ಭವನ, ಮೈಸೂರು.
19 .ನಿರ್ದೇಶಕರು, ಯೋಜನೆ ಉಸ್ತುವಾರಿ ಹಾಗೂ ಮೌಲ್ಯ ಮಾಪನ ಮಂಡಳಿ, ಮೈಸೂರು.
20. ನಿರ್ದೇಶಕರು, ಇ.ಎಂ.ಎಂ.ಆರ್.ಸಿ(EMMRC) ಮಾನಸಗಂಗೋತ್ರಿ, ಮೈಸೂರು.
21 ಕಾರ್ಯಕ್ರಮ ಸಂಯೋಜನಾಧಿಕಾರಿ, ಪ್ರಶಿಕ್ಷಣ ಕೇಂದ್ರ, ಮಾನಸಗಂಗೋತ್ರಿ ಮೈಸೂರು.
22. ಪ್ರಶಿಕ್ಷಣ ಸಂಯೋಜನಾಧಿಕಾರಿ, ಪ್ರಶಿಕ್ಷಣ ಕೇಂದ್ರ , ಮಾನಸಗಂಗೋತ್ರಿ, ಮೈಸೂರು.
23. ಕಾರ್ಯನಿರ್ವಾಹಕ ಅಭಿಯಂತರರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
24. ಸಂಯೋಜನಾಧಿಕಾರಿಗಳು, ದೂರ ಶಿಕ್ಷಣ, ಮಾನಸಗಂಗೋತ್ರಿ, ಮೈಸೂರು.
25. ನಿರ್ದೇಶಕರು, ಡಾ.ಬಾಬು ಜಗಜೀವನರಾಮ್, ಸಂಶೋಧನಾ ಮತ್ತು ವಿಸ್ತರಣಾಕೇಂದ್ರ ಮಾನಸಗಂಗೋತ್ರಿ, ಮೈಸೂರು.
26. ನಿರ್ದೇಶಕರು, ಡಾ.ಬಾಬಾ ಸಾಹೇಬ್‌ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾಕೇಂದ್ರ ಮಾನಸಗಂಗೋತ್ರಿ, ಮೈಸೂರು.
27. ಸಂಯೋಜನಾಧಿಕಾರಿ, ಡಾ॥ ಬಿ.ಆರ್.ಅಂಬೇಡ್ಕರ್‌ಸ್ನಾತಕೋತ್ತರಕೇಂದ್ರ, ಚಾಮರಾಜನಗರ.
28. ನಿರ್ದೇಶಕರು, ಸೆಂಟರ್ ಫಾರ್ ದಿ ಸ್ಟಡೀಸ್‌ಆಫ್ ಸೋಷಿಯಲ್ ಎಕ್ಸ್‌ಕ್ಲೂಸೀವ್ ಅಂಡ್ ಇನ್‌ಕ್ಲೂಸೀವ್ ಪಾಲಿಸಿ (ಯುಜಿಸಿ ಯೋಜನೆ) ಮಾನವಿಕ ವಿಭಾಗ, ಮಾನಸಗಂಗೋತ್ರಿ, ಮೈಸೂರು.
29. ನಿರ್ದೇಶಕರು, ಸ್ಕೂಲ್‌ಆಫ್‌ಡಿಸೈನ್, ಮಾನಸಗಂಗೋತ್ರಿ, ಮೈಸೂರು.
30. ಸಹಾಯಕ ನಿರ್ದೇಶಕರು, ತೋಟಗಾರಿಕೆ ವಿಭಾಗ, ಮಾನಸಗಂಗೋತ್ರಿ, ಮೈಸೂರು.
31. ಎಲ್ಲಾ ಮೇಲ್ವಿಚಾರಕರು /ಕಾರ್ಯನಿರ್ವಾಹಕರು, ಹಣಕಾಸು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
32 ಕಛೇರಿ ಪ್ರತಿ.
33. ರಕ್ಷಾಕಡತ.

| Emp. Code | |

# University of Mysore

| | Years | |
|---|---|---|
| Below 60 | Above 60-80 | Above 80 |

**STATEMENT OF INCOME TAX FOR THE FINANCIAL YEAR 2019-2020**
**(ASSESSMENT YEAR 2020-2021)**
**[See Rule 31(1)(a)]**
**ಆದಾಯತೆರಿಗೆ ಲೆಕ್ಕಾಚಾರದ ನಮೂನೆ**

MALE/FEMALE

**Residing in:** Uni.Qtrs./Rented/Own House

| Date of Birth & Age | | |
|---|---|---|

| PAN No. | |
|---|---|

| Sl No | Name & Designation (In Block Letters) | | | |
|---|---|---|---|---|
| | Adhaar No | | | |
| | Bank A/C No. | | | |
| | Mobile & Office No. | | | |
| | Address | Office | Residence | |
| 1 | **i)** Income from Salary/Pension during the F/Y 2019-2020 including all allowances ( Pay, AGP , HRA, DA, CCA & Others)<br>**ii)** Perquisites including value of unfurnished or furnished accommodation { Section 17(2) & rule 3(1) (details mentioned in Annexure-4)}<br>**iii)** Employer's contribution towards NDCPS.<br>**Total** | | Rs. | For Office Use |
| 2 | **DEDUCTIONS:**<br>House Rent Allowance exempt U/S 10 (13A) and Rule 2A :<br>**Least of the following:-**<br>(i) Actual Amount of HRA received<br>(ii)Rent paid in excess of 10% of salary( Basic pay + AGP + DA)<br>(iii) 40% of Salary ( Basic pay + AGP + DA)<br>Least of the above | | | |
| 3 | **LESS:**<br>**(A)** Standard Deduction u/s 16(i)<br>**(B)** Professional Tax paid u/s 16(iii) of IT Act.<br>**Total** | | 50000 | |
| 4 | Balance (2 –3) | | | |
| 5 | **ADD:** Income from other sources:-<br>**i)**Interest received on Savings Bank Account.<br>**ii)**Income received from other sources.<br>Total of 5(i) & (ii) | | | |
| 6 | Total of (4+5) | | | |
| 7 | **LESS:** Income from House Property or if loss (interest payable on Housing Loan U/S 24(b) (Max.Rs.200000) | | | |
| | (a) Amount of Housing Loan Availed. | | | |
| | (b) Date of Sanctioning Housing Loan. | | | |
| | (c) Name of Lender of Housing Loan. | | | |
| 8 | **Gross Total Income (6-7)**Rs. | | | |

| | | | | | |
|---|---|---|---|---|---|
| 9 | **Details of Deduction under section 80C available from Gross Total Income :-** | | | | |
| | **(a)** | Life Insurance Premium (LIC). | | | |
| | **(b)** | Group Insurance Scheme (GIS). | | | |
| | **(c)** | Public / General Provident Fund & KGID (PPF/GPF & KGID) | | | |
| | **(d)** | Stamp duty and Registration charges incurred on purchase of a new House. | | | |
| | **(e)** | Subscription towards National Savings Certificates (NSC) & Accrued interest. | | | |
| | **(f)** | Amount deposited under Senior Citizens Savings Scheme Rules 2004. | | | |
| | **(g)** | HBA Principal Repayment. | | | |
| | **(h)** | Amount deposited in term deposits of five years or more. | | | |
| | **(i)** | Tuition fees for education. (Max. 2 children). | | | |
| | **(j)** | Subscription towards notified units of Mutual Fund or UTI. | | | |
| | **(k)** | Subscription to notified Bonds of NABARD | | | |
| | **(l)** | Sukanya Samruddi Scheme. | | | |
| | **(m)** | Others. (1) | | | |
| | **(n)** | Others. (2) | | | |
| 10 | **Total of 80C Deductions [9 (a to n)]** | | | | |
| 11 | Contribution to Pension Fund u/s 80CCC (Max.Rs.1,50,000) | | | | |
| 12 | Employee Contribution to NDCPS/NPS u/s 80CCD(1) (Max.Rs.1,50,000) | | | | |
| 13 | Maximum qualifying amount for deduction is limited to Rs.1,50,000 **u/s 80CCE** {i.e, u/s 80C,80CCC, 80CCD(1)}. Columns (10+11+12 ) | | | | |
| 14 | Additional Contribution upto 50,000 towards NPS u/s 80CCD(1B) | | | | |
| | **Note:-** Maximum qualifying amount for deduction u/s 80C, 80CCC,80CCD(1) is Rs.1,50,000/- Additional deduction towards NPS contribution u/s 80CCD(1B) is Rs.50,000/-(Total maximum deduction Limited to Rs.2,00,000/- including additional deduction of Rs. 50,000/-) | | | | |
| 15 | Balance {8-(13+14)} | | | | |
| 16 | **CHAPTER –VIA** | | | | |
| | **SECTION** | **DETAILS** | | | |
| | **(a) 80CCD(2)** | Employer's contribution towards National Pension System maximum amount paid. (Max. Deductible amount is 10% of Salary) | | | |
| | **(b) 80CCG** | Deduction under RGESS. (50% of Investment or Max. Rs.25,000) | | | |
| | **(c) 80D** | 1)Medical Insurance Premium For self including spouse & children (Max. Rs.25,000)<br>2)For parents above 60years additional deduction of Rs.25,000/-<br>3)For Senior citizen upto Rs.50,000/-<br>**Note: Cash payment will not be allowed for Tax reduction.** | | | |

| | | | | |
|---|---|---|---|---|
| | **(d) 80DD** | Medical treatment of Handicapped Dependents (Disability is 40% or more Max.Rs.75,000) | | |
| | **(e)80DDB** | Treatment of specified diseases Rule 11DD. (Certificate on Form 10-1 from Government/Private Doctor to be enclosed) (Max.Rs.40,000) | | |
| | **(f) 80E** | Deduction of Interest on loan taken for Higher Education. | | |
| | **(g) 80EE** | Extra Deduction for House Purchased Loan Rs.50,000/- (From 01-04-2016 onwards) | | |
| | **(h) 80G** | Donation (50% or 100%) (Cash donations exceeding Rs.2000/- do not qualify for tax deduction) | | |
| | **(i)80TTA** | Interest on savings account ( max. Rs.10,000) | | |
| | **(j)80TTB** | For senior citizen Interest earned from Bank & post office deposits deduction upto Rs.50,000/- | | |
| | **(k) 80U** | (a)Person with disability (Max.Rs.75,000) | | |
| | | (b)Person with severe disability (Max. Rs.1,25,000) | | |
| 17 | **Total of chapter VI-A Deductions [16 (a) to (k) ]** | | | |
| 18 | **Total Income (Taxable) (15-17) (After making deduction u/s 80C to 80U)** | | | |
| 19 | Tax on Total income | | | |
| 20 | Tax Rebate /Credit u/s 87A (Max. Rs.12,500) (Taxable income below Rs.5,00,000/-) | | | |
| 21 | Balance Tax payable after Rebate /credit. (19-20) | | | |
| 22 | Health & Education Cess 4% | | | |
| 23 | Total Income Tax (21+22) | | | |
| 24 | Tax Deducted at Source [TDS] :- | | | |
| 25 | Tax to be Paid / Refund (23-24) | | | |

| Monthly TDS amount | Oct-19 | Nov-19 | Dec-19 | Jan-20 | Feb-20 |
|---|---|---|---|---|---|
| | | | | | |

## VERIFICATION

(1) Certified that I am residing in own house/Rented house.
(2) Certified that I am paying rent for Rs.-------------- per month .(Proof of rent paid receipt is enclosed ).
(3) Certified that I have not availed any allowances / facilities.
(4) I,-------------------------------------,do hereby declare that what is stated above is true to the best of my knowledge and belief.

Date:-------------

Signature with
Designation and Department

**Note:**- Enclose photo copies of all supporting documents.

## ANNEXURE-1

## Income Tax Rates for Assessment Year 2020-21:-

### a) Income Tax Slabs for individual for Below 60 years.

| Sl no | INCOME | Tax Rates |
|---|---|---|
| 1 | UptoRs.2,50,000/- | Nil |
| 2 | Rs.2,50,000/-to Rs.5,00,000/- | 5% on income over Rs.2,50,000/- |
| 3 | Rs.5,00,000/-to Rs.10,00,000/- | 20% on above income 5,00,000/- + Rs.12,500 /- |
| 4 | AboveRs. 10,00,000/- | 30% on income above 10,00,000/- +Rs.1,12,500/- |

### b) Income Tax Slabs for individual for 60 years or above but below 80:-

| Sl no | INCOME | Tax Rates |
|---|---|---|
| 1 | Upto Rs.3,00,000/- | Nil |
| 2 | Rs.3,00,000/-to Rs.5,00,000/- | 5% on income over Rs.3,00,000/- |
| 3 | Rs.5,00,000/-to Rs.10,00,000/- | 20% on above income Rs.5,00,000/-+ Rs.10,000 /- |
| 4 | Above Rs.10,00,000/- | 30% on income above 10,00,000/-+ Rs.1,10,000/- |

### c) Income Tax Slabs for individual over 80 years:-

| Sl no | INCOME | Tax Rates |
|---|---|---|
| 1 | UptoRs. 5,00,000/- | Nil |
| 2 | Rs.5,00,000/-to Rs.10,00,000/- | 20% on income over Rs.5,00,000/- |
| 3 | Above Rs.10,00,000/- | 30% on income above 10,00,000/-+ Rs.1,00,000/- |

**Note:-** Education & Health Cess 4%

****

**Here is a Format of the information you should provide to your employer-**

| Sl no | To Claim | Proofs to be Provided |
|---|---|---|
| 1 | House Rent Allowance (HRA) | Name, address and PAN of the landlord if the total rent paid in the Financial year is more than Rs.1,00,000/-(one lakh) (if the property is jointly owned ,provide PAN of all landlords) |
| 2 | LTA | Travel Bills, receipts, as evidence of your expenses. |
| 3 | Deduction for interest on housing loan. | Name, address and PAN of the lender. |
| 4 | Deduction under section 80(chapter VI-A of the income tax act) | Evidence of investment or expenditure. |

****

# ANNEXURE-2

| Emp.code | | NAME : | | | | | | DEPT. | | | | | | | |
|---|---|---|---|---|---|---|---|---|---|---|---|---|---|---|---|
| STATEMENT OF THE ANNUAL INCOME & SAVINGS FOR THE FINANCIAL YEAR 2019-2020 | | | | | | | | | | | | | | | |
| | INCOME | | | | | | | | SAVINGS/DEDUCTION | | | | | | |
| Month | Pay/ Pension | AGP | DA | HRA | CCA | MA | Others | Gross | PT | LIC | GIS | HBA Uni. | LIC, HFL | Others | IT Deducted |
| MAR-2019 | | | | | | | | | | | | | | | |
| APR-2019 | | | | | | | | | | | | | | | |
| MAY-2019 | | | | | | | | | | | | | | | |
| JUN-2019 | | | | | | | | | | | | | | | |
| JUL-2019 | | | | | | | | | | | | | | | |
| AUG-2019 | | | | | | | | | | | | | | | |
| SEP-2019 | | | | | | | | | | | | | | | |
| OCT-2019 | | | | | | | | | | | | | | | |
| NOV-2019 | | | | | | | | | | | | | | | |
| DEC-2019 | | | | | | | | | | | | | | | |
| JAN-2020 | | | | | | | | | | | | | | | |
| FEB-2020 | | | | | | | | | | | | | | | |
| 1-1-2019 DA | | | | | | | | | | | | | | | |
| 1-7-2019 DA | | | | | | | | | | | | | | | |
| EL surrender | | | | | | | | | | | | | | | |
| Arrears | | | | | | | | | | | | | | | |
| Others Income | | | | | | | | | | | | | | | |
| Total | | | | | | | | | | | | | | | |

Signature of Employee

## ಅನುಬಂಧ–3(Annexure-3)

## ಆದಾಯ ತೆರಿಗೆ ಲೆಕ್ಕಚಾರದ ವಿವರದೊಡನೆ ಲಗತ್ತಿಸಬೇಕಾದ ಒಪ್ಪಿಗೆ ಪತ್ರ

ನಾನು ಆದಾಯ ತೆರಿಗೆ ಲೆಕ್ಕಾಚಾರದ ವಿವರಗಳನ್ನು ನೀಡುವಾಗ ನೀಡಿದ ಪ್ರಸ್ತಾವನೆಗೆ ಅನುಗುಣವಾಗಿ ಉಳಿತಾಯಗಳನ್ನು ತೊಡಗಿಸುವುದನ್ನು ಜನವರಿ 2020ರ ಒಳಗೆ ಮಾಡಲು ಬದ್ಧನಾಗಿರುತ್ತೇನೆ. ಹಾಗೆ ಮಾಡಲಾಗದ ಸಂದರ್ಭಗಳಲ್ಲಿ ನನ್ನಿಂದ ಪಾವತಿಯಾಗಬೇಕಾದ ಆದಾಯ ತೆರಿಗೆ ಬಾಬ್ತನ್ನು ಹಣಕಾಸು ವಿಭಾಗದ ಮೂಲಕ ಬಡ್ಡಿ / ದಂಡ ಬಡ್ಡಿ ಸಹಿತ ಪಾವತಿಸಲು ಈ ಮೂಲಕ ಒಪ್ಪಿಗೆ ನೀಡಿರುತ್ತೇನೆ ಹಾಗೂ ಆದಾಯತೆರಿಗೆ ಇಲಾಖೆಯು ಕೈಗೊಳ್ಳುವ ಕ್ರಮಗಳನ್ನು ನನ್ನ ಸ್ವಂತ ಜವಾಬ್ದಾರಿಯಿಂದ ಇತ್ಯರ್ಥಪಡಿಸುತ್ತೇನೆ.

ಹೆಸರು : ಉದ್ಯೋಗಿಯ ಸಹಿ

ಹುದ್ದೆ : ಉದ್ಯೋಗಿಯ ಸಂಖ್ಯೆ:

ವಿಭಾಗ :

ಸೂಚನೆ:(1)ಆದಾಯ ತೆರಿಗೆ ಕಾಯ್ದೆಯಡಿಯಲ್ಲಿ ರಿಯಾಯಿತಿಗಳನ್ನು ಪಡೆಯಬೇಕಾದಲ್ಲಿ ಅದಕ್ಕೆ ಸಂಬಂಧಿಸಿದ ಅಗತ್ಯ ದಾಖಲೆಗಳನ್ನು (Supporting document) ಕಡ್ಡಾಯವಾಗಿ ಈ ತಃಖ್ತೆಯೊಂದಿಗೆ ಸಲ್ಲಿಸಬೇಕು. ಅಗತ್ಯ ದಾಖಲೆಗಳನ್ನು ಸಲ್ಲಿಸದಿದ್ದಲಿ ರಿಯಾಯಿತಿ ನೀಡುವುದನ್ನು ಪರಿಗಣಿಸಲಾಗದು.

(2)ಸೆಕ್ಷನ್ 24(1) ರ ಪ್ರಕಾರ ಮನೆ ಸಾಲದ ಮೇಲೆ ಬಡ್ಡಿ (Accrued – Interest only) ರಿಯಾಯಿತಿ ಪಡೆಯಬೇಕಾದ್ದಲ್ಲಿ ಕಡ್ಡಾಯವಾಗಿ ಸಾಲವನ್ನು ಪಡೆದಿರುವ ಬ್ಯಾಂಕ್ / ಸಂಸ್ಥೆಗಳಿಂದ ಬಡ್ಡಿಯ ಮೊಬಲಗನ್ನು ಸೂಚಿಸುವ ದೃಢೀಕರಣ ಪತ್ರವನ್ನು ಒದಗಿಸಬೇಕು. ಬಡ್ಡಿಗೆ ಸಂಬಂಧಿಸಿದ ದೃಢೀಕರಣ ಪತ್ರವು 2019–20 ನೇ ಸಾಲಿನ ಹಣಕಾಸು ವರ್ಷದಲ್ಲಿ ಪಾವತಿಸಲಾದ ಒಟ್ಟು ಅಸಲಿನ ಬಗ್ಗೆ ಹಾಗೂ ವಿಧಿಸಲ್ಪಟ್ಟಿರುವ ಬಡ್ಡಿಯ ಬಗ್ಗೆ ಸ್ಪಷ್ಟ ಮಾಹಿತಿಯನ್ನು ಒಳಗೊಂಡಿರಬೇಕು.

## ಅನುಬಂಧ–4(Annexure-4)

ವಿಶ್ವವಿದ್ಯಾನಿಲಯದ ವಸತಿ ಗೃಹಗಳಲ್ಲಿ ವಾಸ ಮಾಡುತ್ತಿರುವ ಉದ್ಯೋಗಿಗಳ ಆದಾಯ ತೆರಿಗೆ ಲೆಕ್ಕಾಚಾರ ಮಾಡುವಾಗ Perquisite Value ಅನ್ನು ಮೂಲ ಆದಾಯಕ್ಕೆ ಸೇರಿಸಿಕೊಳ್ಳಬೇಕು.

Perquisite Value ಲೆಕ್ಕಾಚಾರ ಮಾಡುವಾಗ ಒಟ್ಟು ಸಂಬಳದ ಶೇ 7.50% ಅನ್ನು Perquisite Value ಎಂದು ಮೂಲ ಆದಾಯಕ್ಕೆ ಪರಿಗಣಿಸಿ ಸೇರಿಸಿಕೊಳ್ಳುವುದು. ಒಟ್ಟು ಸಂಬಳವನ್ನು ಈ ಕೆಳಕಂಡ ರೀತಿ ಲೆಕ್ಕಾಚಾರ ಮಾಡುವುದು.

| | |
|---|---|
| Basic Pay | |
| AGP | |
| DA | |
| HRA | |
| CCA | |
| Surrender | |
| Arrears/Others | |
| **Total Salary** | |